ಎಲ್ಲ ಬಗೆಯ ನಿರೂಪಣೆಗಳನ್ನು ಹೋಲಿಸಿ, ಜಾಲಿಸಿ ತೆಗೆದರೆ ನನಗೆ ಮೂರೇ ವಿಧಗಳು ಕಾಣಿಸಿವೆ. ಮೊದಲನೆಯದು ಅತ್ಯಂತ ಕ್ಲುಪ್ತವೂ, ಆಪ್ತವೂ ಆದ ಆಕಾಶವಾಣಿ ಶೈಲಿ. ಇದರಲ್ಲಿ ಆಡಂಬರಕ್ಕೆ ಅವಕಾಶವೇ ಇಲ್ಲ. "ಇಲ್ಲಿಯವರೆಗೆ ನೀವು ನಗರದ ಹೃದ್ರೋಗ ತಜ್ಞ ಡಾ. ಕಲ್ಲಪ್ಪ ಇವರಿಂದ 'ನಮ್ಮ ಹೃದಯ ನಮ್ಮ ಕೈಯಲ್ಲಿ' ಎಂಬ ಭಾಷಣ ಕೇಳಿದಿರಿ. ಈಗ ಮಮದಾಪುರ ಗ್ರಾಮದ ಶ್ರೀಮತಿ ಬಾಗಲಿ ನಾಗಮ್ಮ ಮತ್ತು ತಂಡದವರಿಂದ ಜನಪದ ಸಂಗೀತವನ್ನು ಕೇಳಿ." ಇದು ಸರಿಯಾದ ಕ್ರಮ. ಇದರಲ್ಲಿ ಮಾಹಿತಿ ಮಾತ್ರ ಇರುತ್ತದಾದ್ದರಿಂದ ಕೆಲವೊಮ್ಮೆ ಶುಷ್ಕ ಅನಿಸಲೂಬಹುದು. ಆದರೆ ಖಂಡಿತವಾಗಿಯೂ ಬೋರ್ ಅಂತೂ ಹೊಡೆಸಲ್ಲ. ಆ ವೈದ್ಯರ ಸಮಯವನ್ನು ಕಬಳಿಸಲ್ಲ. ಇದರ ಮುಖ್ಯ ಲಕ್ಷಣವೆಂದರೆ ನಿರೂಪಕ ಇಲ್ಲಿ ಕಾಣಿಸುವುದಿಲ್ಲ, ಕೇಳಿಸುತ್ತಾನೆ. ಹಾಗೆ ನಿಜವಾದ ಅರ್ಥದಲ್ಲಿ ನಿರೂಪಕನು ನೇಪಥ್ಯ ಕಲಾವಿದ. ರುಚಿಕಟ್ಟಾದ ಸಾಂಬಾರಿಗೆ ವಿಶಿಷ್ಟ ರುಚಿಯ ಘಮಲನ್ನು ನೀಡಿ ಹಿನ್ನೆಲೆಗೆ ಸರಿಯುವ ಕರಿಬೇವಿನಂತೆ ಅವನು ಇರಬೇಕು ಆದರೆ ಇದ್ದೂ ಇರದಂತಿರಬೇಕು!

ಇನ್ನು ಎರಡನೆಯದು ಈ ಮೇಲಿನ ಮಾದರಿಗೆ ಸ್ವಲ್ಪೇ ಸ್ವಲ್ಪ ಹೆಚ್ಚಿಗೆ ರಸಾಲಂಕಾರ ಮತ್ತು ಜೀವಂತಿಕೆಗಳನ್ನು ಬೆರೆಸಿದ ಲವಲವಿಕೆಯ ಆತ್ಮೀಯ ಶೈಲಿ. ಈ ಹದವಾದ ಚೇತೋಹಾರಿ ಶೈಲಿಗೆ ಅತ್ಯುತ್ತಮ ಉದಾಹರಣೆ ಅಮೀನ್ ಸಯಾನಿಯವರು. ಎಂಬತ್ತರ ದಶಕದಲ್ಲಿ ರೇಡಿಯೊ ಸಿಲೋನ್‌ನ ಬಿನಾಕಾ ಗೀತ್‌ಮಾಲಾ ಕಾರ್ಯಕ್ರಮದ ಮೂಲಕ ನಿರೂಪಣೆಗೊಂದು ಸ್ಟಾರ್ ವ್ಯಾಲ್ಯೂ ತಂದುಕೊಟ್ಟ ಸಯಾನಿ ಆ ಇಡೀ ಕಾರ್ಯಕ್ರಮವನ್ನು ಹದವಾಗಿ ಆವರಿಸಿಕೊಳ್ಳುತ್ತಿದ್ದ ರೀತಿಯೇ ಅನನ್ಯವಾಗಿತ್ತು, ಅತಿವಿಶಿಷ್ಟವಾಗಿತ್ತು. 'ಪ್ರಿಯ ಶ್ರೋತೃಗಳೇ' ಎಂಬ ಶುಷ್ಕ ಸರ್ಕಾರಿ ಸಂಬೋಧನೆಯನ್ನು ಬದಿಗಿರಿಸಿ 'ಬನ್ನಿ ಸ್ನೇಹಿತರೇ' (ಆಯಿಯೇ ದೋಸ್ತೋ) ಎಂದು ಒಳಗೊಳಿಸಿಕೊಂಡ ಮೊದಲ ನಿರೂಪಕ ಅವರು. ಬಿನಾಕಾ ಗೀತ್‌ಮಾಲಾ ಕಾರ್ಯಕ್ರಮದ ಜನಪ್ರಿಯತೆಗೆ ಅಲ್ಲಿನ ಮಧುರ ಹಾಡುಗಳಷ್ಟೇ ಕಾರಣವಾದುದು ಅಮೀನ್ ಸಯಾನಿಯರ ಆತ್ಮೀಯ ಕಂಠದ ನಿರೂಪಣೆಯೂ ಕೂಡ ಎಂಬುದನ್ನು ಆ ಕಾರ್ಯಕ್ರಮದ ಕೇಳುಗರಾದ ಹಳೆಯ ತಲೆಮಾರಿನವರೆಲ್ಲ ಒಪ್ಪುತ್ತಾರೆಂಬ ಅದಮ್ಯ ವಿಶ್ವಾಸ ನನ್ನದು. ಭಾರತೀಯ ಮೂಲದ ಅಮೀನ್ ಸಯಾನಿ ರೇಡಿಯೊ ಶ್ರೀಲಂಕಾದಿಂದ ಬಿತ್ತರಗೊಳ್ಳುತಿದ್ದ ತಮ್ಮ ಕಾರ್ಯಕ್ರಮದ ನಿರೂಪಣಾ ಶೈಲಿಯಿಂದಾಗಿಯೇ ಇಡೀ ದಕ್ಷಿಣ ಏಷ್ಯಾದಲ್ಲಿ ಖ್ಯಾತಿ ಪಡೆದವರಾಗಿದ್ದರು. ಆಸಕ್ತರು ಈಗಲೂ ಯೂಟ್ಯೂಬಿನಲ್ಲಿ ಸಯಾನಿಯವರ ಗೀತ್‌ಮಾಲಾದ ಆಡಿಯೊ ಕ್ಲಿಪ್ಪಿಂಗ್‌ಗಳನ್ನು ಕೇಳಬಹುದು. 'ಲೂನಾರ್ಸ್ ಎಂದೂ ಮರೆಯದ ಹಾಡು' ಕಾರ್ಯಕ್ರಮದ ರಸಪೂರ್ಣ ನಿರೂಪಣೆಯ ರವಿ ಬೆಳಗೆರೆ, 'ಬಾನುಲಿ ದೂರವಾಣಿ ರಸಪ್ರಶ್ನೆ' ಲೈವ್ ಕಾರ್ಯಕ್ರಮದ 'ಲೈವ್'ಲಿ ನಿರೂಪಣೆಯ ಬಸವರಾಜ ಸಾದರ, 'ಮಧುರಮಧುರವೀ ಮಂಜುಳಗಾನ'ದ ಮಾಹಿತಿಪೂರ್ಣ ನಿರೂಪಣೆಯ ಸಾರ್ಥವಳ್ಳಿ ನಾರಾಯಣಸ್ವಾಮಿಯಂಥವರು ಈ ಮಾದರಿಗೆ ಸೇರಿಸಬಹುದಾದ ಕನ್ನಡದ ಒಂದೆರಡು ಉದಾಹರಣೆಗಳು. ಏಕೆಂದರೆ ಇವು ಹೆಚ್ಚೆಂದರೆ ಹೆಚ್ಚಲ್ಲದ, ಕಮ್ಮಿಯೆಂದರೆ ಕಮ್ಮಿಯಲ್ಲದ, 'ಹದ'ದ ಆಚೆ ಒಂದು ಶಬ್ದವೂ ಇರದ ನಿರೂಪಣಾಕ್ರಮಗಳು.

ಇನ್ನೀಗ ಮೂರನೇ ಮಾದರಿ. ಇದೇ ಅತಿಭೀಕರ ಮಾದರಿ! ಈ ಮಾದರಿಯ ನಿರೂಪಕರು ಸಭಾತ್ಯಾಗ ಪ್ರಚೋದನಾ ಪ್ರವೀಣರು. ಇದಕ್ಕೆ ಉದಾಹರಣೆಯನ್ನು ನೀಡೋದೇ ಬೇಕಿಲ್ಲ. ಟೀವಿಯಲ್ಲಿ, ವೇದಿಕೆಗಳಲ್ಲಿ ಇತ್ತೀಚೆಗೆ ಇವರ ಸಂತತಿಯೇ ಸಾವಿರವಾಗಿದೆ. ಇಂಥವರೇ ಸಾವಿರದವರೂ ಆಗಿಬಿಡುತ್ತಾರೇನೋ ಎಂಬ ದಿಗಿಲನ್ನೂ ಹುಟ್ಟುಹಾಕಿದೆ. ಇವರಿಗೆ ಸಭಿಕರ ಸಮಯದ ಬೆಲೆ ಗೊತ್ತಿಲ್ಲ. ಮುಖ್ಯ ಭಾಷಣಕಾರರ ಮಹತ್ವ ತಿಳಿದಿಲ್ಲ. ತಮ್ಮ ನಿರೂಪಣೆ ಎಷ್ಟು